

ಕಾನಾಸ್ ನಗರದ ವಿಹಂಗಮ ನೋಟ




ರಕ್ಕಸರ ಕಥೆ ಹೇಳುವ 'ಡೆವಿಲ್ ಮ್ಯೂಸಿಯಂ'

ಒಂಬತ್ತನೇ ಕೋಟೆಯ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಆಗಿನ ಸೋವಿಯತ್ ಯೂನಿಯನ್ ಲಿಥುವೇನಿಯಾವನ್ನು ಆಕ್ರಮಿಸಿಕೊಂಡ ಸಮಯದಲ್ಲಿ ಈ ಕೋಟೆಯನ್ನು ಸೆರೆಮನೆಯಾಗಿ ಉಪಯೋಗಿಸುತ್ತಿದ್ದರು. ನಂತರದಲ್ಲಿ ಇದು ನಾಜಿಗಳ ಪಾಲಾದ ಮೇಲೆ ಯಹೂದಿಗಳ ಬಂದೀಖಾನೆಯಾಯಿತು. ಜೊತೆಗೆ ಅವರು ನಡೆಸಿದ 45–50 ಸಾವಿರ ಯಹೂದಿಗಳ ಹತ್ಯೆಗಳಿಗೆ ಮೂಕಸಾಕ್ಷಿಯಾಯಿತು.

ಇತ್ತೀಚಿನ ದಿನಗಳಲ್ಲಿ, ಆ ಕಥೆಗಳನ್ನು ಹೇಳಲೆಂದೇ ಉಳಿದ ಕೋಟೆಯ ಅವಶೇಷಗಳನ್ನು ವಸ್ತು ಸಂಗ್ರಹಾಲಯವಾಗಿ ಮಾರ್ಪಾಡುಗೊಳಿಸಲಾಗಿದೆ. ಕಾರಾಗೃಹ, ಕೈದಿಗಳು ಬಳಸುತ್ತಿದ್ದ ವಸ್ತುಗಳು, ಹಾಸಿಗೆ, ಶೌಚಾಲಯ ಎಲ್ಲವನ್ನು ಇಲ್ಲಿ ಕಾಣಬಹುದು. ಅಲ್ಲಿ ಬಂದಿಗಳಾಗಿದ್ದವರ ಬದುಕು ಅದೆಷ್ಟು ಅಸಹನೀಯವಾಗಿತ್ತು ಎಂಬ ಚಿತ್ರಣವನ್ನು ಇದು ಕಟ್ಟಿಕೊಡುತ್ತದೆ. ಸಂಗ್ರಹಾಲಯವನ್ನು ನೋಡಿ ಅಲ್ಲಿಂದ ಹೊರಗೆ ಬಂದರೆ ಸುಮಾರು ನೂರಾ ಐದು ಅಡಿ ಎತ್ತರದ ಸ್ಮಾರಕವೊಂದನ್ನು ಕಾಣಬಹುದು. ನಾಜಿಗಳ ಕೈಗೆ ಸಿಕ್ಕು ಪ್ರಾಣತೆತ್ತ ಯಹೂದಿಗಳ ಸ್ಮರಣಾರ್ಥವಾಗಿ ಇದನ್ನು ನಿಲ್ಲಿಸಲಾಗಿದೆ.

ಅಲ್ಲಿಂದ ಮುಂದೆ ಸುಮಾರು ಹದಿನಾಲ್ಕನೇ ಶತಮಾನದಲ್ಲಿ ಕಟ್ಟಲಾದ ಕಾನಾಸ್ ಕೋಟೆಯ ಬಳಿ ಬಂದೆವು. ನೆಮ್ಯುನಸ್ ನದಿಯ ದಂಡೆಯ ಮೇಲೆ ಗೋಥಿಕ್ ಮಾದರಿಯಲ್ಲಿ ಕಟ್ಟಲಾದ ಕೋಟೆ ಇದು. ಇದನ್ನು ವ್ಯಾಪಾರ ಜಲಮಾರ್ಗಗಳನ್ನು ಕಾಯುವಂತಹ ಜಾಗವನ್ನಾಗಿ ಉಪಯೋಗಿಸಲಾಗುತ್ತಿತ್ತು. ಶತಮಾನಗಳಿಂದ ನಡೆದ ಅದೆಷ್ಟೋ ಯುದ್ಧಗಳಲ್ಲಿ ದಾಳಿಗೆ ಗುರಿಯಾಗಿ ಈಗ ಕೆಲ ಭಾಗಗಳಷ್ಟೇ ಉಳಿದಿದೆ. ಉತ್ಖನನದ ಸಮಯದಲ್ಲಿ ಸಿಕ್ಕ ಹಲವಾರು ವಸ್ತುಗಳನ್ನು ಇಲ್ಲಿ ಸಂಗ್ರಹಿಸಿಡಲಾಗಿದೆ. ಬಿಸಿಲ ದಿನಗಳಲ್ಲಿ ಸಂಜೆಯ ಹೊತ್ತು ಗೆಳೆಯರೊಂದಿಗೆ, ಕುಟುಂಬದವರೊಂದಿಗೆ ಸಮಯ ಕಳೆಯಲು ಸೂಕ್ತ ಜಾಗವಿದು.

ಹೊರಗಿನ ವಾತಾವರಣ ಅಷ್ಟೇನೂ ಉಲ್ಲಾಸದಾಯಕವಾಗಿರಲಿಲ್ಲ. ಮಳೆ, ಚಳಿ, ಗಾಳಿಯ ಜೊತೆಗೆ ನಾವು ನಿಧಾನವಾಗಿ ಹೆಜ್ಜೆ ಇಡುತ್ತಾ ದಾರಿಯಲ್ಲಿ ಕಂಡ ವಿವಿಧ ಸ್ಮಾರಕಗಳು, ಪ್ರತಿಮೆಗಳು, ಕಾರಂಜಿಗಳು, ಕಲ್ಲು ಹಾಸಿದ ಹಾದಿಗಳು, ಗ್ರಾಫಿಟ್ಟಿಗಳನ್ನೆಲ್ಲ ಕಣ್ತುಂಬಿಕೊಳ್ಳುತ್ತ ಟೌನ್ ಹಾಲ್ ವೃತ್ತದ ಕಡೆಗೆ ಬಂದೆವು. ಅದರ ಮಧ್ಯದಲ್ಲಿ ಸುಮಾರು 53 ಮೀಟರ್‌ಗಳಷ್ಟು ಎತ್ತರದ 'ದಿ ವೈಟ್ ಸ್ವಾನ್' ಎಂದು ಕರೆಯಲಾಗುವ